ಇವೆಲ್ಲವೂ ನುರಿತ ಕಲಾವಿದರ ಕೈ ಚಳಕದಿಂದ ಮೂಡಿದ ಕಲಾಕೃತಿಗಳು. ಇಂತಹ ನೂರಾರು ಪ್ರತಿಕೃತಿಗಳನ್ನು ಚಿತ್ರದುರ್ಗದಲ್ಲಿನ ಮುರುಘಾ ಮಠದ ಆವರಣದ 'ಕಾಯಕ ಗ್ರಾಮ' ಎಂಬ ವಿಶಾಲವಾದ ಹಸಿರು ಸಿರಿಯ ನಡುವೆ ಇರುವ ಪಾರ್ಕ್‌ನಲ್ಲಿ ಕಾಣಬಹುದು. ಆದಿ ಮಾನವನಿಂದ ಹಿಡಿದು ಪ್ರಸ್ತುತ ಜೀವನದ ಹಲವು ಮಜಲುಗಳನ್ನು ಬಿಂಬಿಸುವ ಅತ್ಯಾಕರ್ಷಕ ಕಲಾಕೃತಿಗಳನ್ನೂ ಇಲ್ಲಿ ನೋಡಿ ಕಣ್ತುಂಬಿಕೊಳ್ಳಬಹುದು.

—ಆರ್. ವೀರೇಶ್ ಕುಮಾರ್, ಬೆಂಗಳೂರು



# ಮರದಲ್ಲಿ ಕಂಡ ಗಣಪ!

ಹಾವೇರಿಯ ಸವಣೂರು ತಾಲ್ಲೂಕಿನ ಹುರಳಿಕುಪ್ಪಿಯ ಊರ ಮುಂದೆ ಬೃಹತ್ ಬೇವಿನ ಮರವೊಂದಿದೆ. ಆ ಮರದ ಬುಡದಲ್ಲೊಂದು ಗಣಪತಿಯ ರೂಪವೂ ಇದೆ. ಸೊಗಸಾಗಿರುವ ಅದು ನೋಡುಗರನ್ನು ತಕ್ಷಣವೇ ತನ್ನತ್ತ ಸೆಳೆಯುತ್ತದೆ. ಅದು ತಾನೇ ಮೂಡಿರಲಿಕ್ಕಿಲ್ಲ. ನೀಟಾಗಿ ಕೆತ್ತಿದಂತಿದೆ. ಆದರೂ ನೋಡಲು ಚೆಂದವಾಗಿ ಕಾಣುತ್ತದೆ.

ನೀಲಿ, ಹಳದಿ ಮತ್ತು ಬಿಳಿಯ ಬಣ್ಣ ಬಳಿಯಲಾಗಿದೆ. ಇದನ್ನು ಗ್ರಾಮಸ್ಥರು ದಿನವೂ ಪೂಜಿಸುತ್ತಾರೆ. ಗಣೇಶ ಚತುರ್ಥಿಯಂದು ಭಕ್ತಿಯಿಂದ ಊರ ಅಗಸಿಯಲ್ಲಿರುವ ಈ ಗಣೇಶನನ್ನು ಪೂಜಿಸುವುದು ವಾಡಿಕೆ. ಒಂದೆಡೆ ಭಕ್ತಿಭಾವ; ಮತ್ತೊಂದೆಡೆ ಹೀಗೆ ಮರವನ್ನು ಕತ್ತರಿಸುವುದರಿಂದ ಅದರ ನೀರಿನ ನಾಳಕ್ಕೆ (ಕ್ಸೈಲಂ) ಮತ್ತು ಆಹಾರ ನಾಳಕ್ಕೆ (ಫ್ಲೋಯಂ) ತೊಂದರೆ. ಭಕ್ತಿಯಲ್ಲಿ ಮುಳುಗಿರುವ ಊರ ಜನರಿಗೆ ಈ ಬಗ್ಗೆ ತಿಳಿಸುವುದಾದರೂ ಹೇಗೆ?

—ಪ್ರಕಾಶ ಎಸ್. ಮನ್ನಂಗಿ, ಮೋಟೆಬೆನ್ನೂರು





# ಸಮಾಜ ಸೇವೆಗೆ ನಾನಾ ಅವತಾರ

ಗಾರೆ ಮೇಸ್ತ್ರಿ ಕೆಲಸದಿಂದ ಜೀವನ ಸಾಗಿಸುವ ಉಡುಪಿ ಬಳಿಯ ಕಟಪಾಡಿ ರವಿ ಸಮಾಜ ಸೇವೆ ಮಾಡುತ್ತಿರುವ ರೀತಿ ವಿಭಿನ್ನವಾದದ್ದು. ಆರು ವರ್ಷಗಳಿಂದ ಅವರು, ಶ್ರೀಕೃಷ್ಣ ಜನ್ಮಾಷ್ಟಮಿಗೆ ನಾನಾ ವೇಷ ಧರಿಸಿ ಉಡುಪಿ, ಮಲ್ಪೆ ಹಾಗೂ ಕಾಪು ಪಟ್ಟಣಗಳ ವ್ಯಾಪ್ತಿಯಲ್ಲಿ ಓಡಾಡಿ ಧನಸಂಗ್ರಹ ಮಾಡುತ್ತಿದ್ದಾರೆ. ಕಳೆದ ಆರು ವರ್ಷಗಳಲ್ಲಿ ಸಂಗ್ರಹವಾದ 72 ಲಕ್ಷ ರೂಪಾಯಿಯನ್ನು ಅನಾರೋಗ್ಯ ಪೀಡಿತ 33 ಮಕ್ಕಳ ಚಿಕಿತ್ಸೆಗೆ ನೀಡಿದ್ದಾರೆ. ಈ ವರ್ಷ ನಾಲ್ಕು ಮಕ್ಕಳ ಚಿಕಿತ್ಸೆಗೆ ಧನಸಹಾಯ ಮಾಡಿದ್ದಾರೆ. ಈ ಸೇವೆಗೆಂದೇ ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ಸಹ ತೆರೆದಿದ್ದಾರೆ.

ಈ ವರ್ಷ ಶ್ರೀಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಹಾಲಿವುಡ್ ಸಿನಿಮಾದ 'ಡಾರ್ಕ್ ಇಲ್ಲೈಟ್' ಫ್ಯಾಂಟಸಿ ವೇಷ ಧರಿಸಿ ಜನರನ್ನು ರಂಜಿಸಿ ಧನ ಸಂಗ್ರಹಿಸಿದ್ದಾರೆ. ಇವರ ವಿಭಿನ್ನ ಸೇವೆಯನ್ನು ಹಲವರು ಶ್ಲಾಘಿಸಿದ್ದಾರೆ.

—ಜಿ. ನಾಗೇಂದ್ರ, ಸಂಡೂರು

